ಬೆಲೆಯ ಆಧಾರದ ಮೇಲೆ ಸ್ವಾಧೀನಪಡಿಸಿದ ಜಮೀನುಗಳಿಗೆ ಎಕರೆಯೊಂದಕ್ಕೆ ದರ ನಿಗದಿಪಡಿಸಲಾಗಿದೆ.

ಸದರಿ ಒಪ್ಪಂದದ ದರದಲ್ಲಿ ಪರಿಹಾರ ಪಡೆಯದೇ ಇರುವ ಭೂ ಮಾಲೀಕರಿಗೆ ಭೂಸ್ವಾಧೀನ ಕಾಯ್ದೆಯನ್ವಯ ಐತೀರ್ಪು ರಚಿಸಿ, ಪರಿಹಾರವನ್ನು ಪಾವತಿಸಲಾಗುವುದು.

ಇ) ಈ ಘಟಕ ನಿರ್ಮಾಣ ಹಂತದಲ್ಲಿದೆ. ಸಧ್ಯಕೆ ಈ ಹಂತದಲ್ಲಿ ಸುಮಾರು 6000 ಜನರಿಗೆ ಉದ್ಯೋಗ ನೀಡಲಾಗಿದೆ.

ಈ) ನಿರ್ಮಾಣ ಹಂತದಲ್ಲಿ ಸುಮಾರು 55% ರಷ್ಟು ಸ್ಥಳೀಯರಿಗೆ ಉದ್ಯೋಗ ನೀಡಲಾಗಿದೆ.

ಉ) ಯೋಜನೆಯು ಅಂತಿಮ ಹಂತದಲ್ಲಿದ್ದು, 400 ಕೆ.ವಿ. ವಿದ್ಯುತ್ ಸಾಮರ್ಥ್ಯದ ಕಾರ್ಯವು ಬಾಕಿಯಿದ್ದು, ಇದು ಪೂರ್ಣಗೊಂಡ ಕೂಡಲೇ ಅಂದಾಜು ಏಪ್ರಿಲ್ 2010ರ ಒಳಗಾಗಿ ಯೋಜನೆಯು ಕಾರ್ಯಾರಂಭ ಗೊಳ್ಳುವ ಸಾಧ್ಯತೆ ಇರುತ್ತದೆ.

ಉಡುಪಿ ದೇವಸ್ಥಾನಗಳ ಆದಾಯ

167 (506) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಮಾನ್ಯ ಗೃಹ ಹಾಗೂ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯ ಕಾಪು ವಿಧಾನಸಭಾ ಕ್ಷೇತ್ರದಲ್ಲಿ ಬರುವ ಧಾರ್ಮಿಕ ದತ್ತಿ ಇಲಾಖೆಗೆ ಸೇರಿರುವ ಒಟ್ಟು ಎಷ್ಟು ದೇವಸ್ಥಾನಗಳಿವೆ;

ಆ) ಆ ದೇವಸ್ಥಾನಗಳಿಂದ ಬರುವ ಆದಾಯವೆಷ್ಟು;

ಇ) ಆ ದೇವಸ್ಥಾನಗಳಿಂದ ಬಂದ ಆದಾಯವನ್ನು ಸಾರ್ವಜನಿಕ ಕ್ಷೇತ್ರ ಮೂಲಭೂತ ಸೌಲಭ್ಯಗಳಿಗೆ ಬಳಕೆ ಮಾಡಿಕೊಳ್ಳಬಹುದೆ?

ಡಾ॥ ವಿ.ಎಸ್.ಆಚಾರ್ಯ (ಗೃಹ ಹಾಗೂ ಮುಜರಾಯಿ ಸಚಿವರು) :

ಅ) ಒಟ್ಟು 79.

ಆ) ವಾರ್ಷಿಕ ರೂ. 2,49,04,724-00 (ಅಂದಾಜು)

ಇ) ಸಾರ್ವಜನಿಕ ಕ್ಷೇತ್ರದ ಮೂಲಭೂತ ಸೌಲಭ್ಯಗಳಿಗೆ ದೇವಾಲಯಗಳ ಆದಾಯವನ್ನು ಬಳಕೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.

ದೇವಸ್ಥಾನದ ಆದಾಯವನ್ನು ಆಯಾಯ ದೇವಸ್ಥಾನದ ಪೂಜಾ ಕೈಂಕಾರ್ಯಕ್ಕಾಗಿ ಹಾಗೂ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಗಳಿಗೆ ಹಾಗೂ ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಮತ್ತು ನಿಯಮಾವಳಿಯಂತೆ, ಧರ್ಮ, ಸಂಸ್ಕೃತಿ, ಶಿಕ್ಷಣ ಮುಂತಾದ ಉದ್ದೇಶಗಳಿಗಾಗಿ ಮಾತ್ರ ಬಳಕೆ ಮಾಡಲು ಅವಕಾಶವಿರುತ್ತದೆ.

ರಾಜ್ಯದ ವಿದ್ಯುತ್ ಕಂಪನಿಗಳಲ್ಲಿ ನೀಡಿದ್ದ ಠೇವಣಿ ಹಣ ನಷ್ಟವಾಗಿರುವುದು

165 (500) ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ವಿದ್ಯುತ್ ಕಂಪನಿಯಲ್ಲಿ 2007–08ನೇ ಸಾಲಿನಲ್ಲಿ ನಿಶ್ಚಿತ ಠೇವಣಿ ಇಟ್ಟ ಹಣವೆಷ್ಟು; ಹಾಗೂ ಠೇವಣಿ ಇಟ್ಟ ಹಣವನ್ನು ನಷ್ಟ ಮಾಡಲು ಕಾರಣಗಳೇನು; 2008–09 ಹಾಗೂ 2009–10ನೇ ಸಾಲಿನಲ್ಲಿ ನಷ್ಟವುಂಟಾಗಿರುವ ಮೊತ್ತವೆಷ್ಟು; ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);

ಆ) 2009–10ನೇ ಸಾಲಿನಲ್ಲಿ ನಷ್ಟವುಂಟಾಗಿರುವ ಮೊತ್ತವೆಷ್ಟು; ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);

ಇ) ಗುಲ್ಬರ್ಗಾ ವಿದ್ಯುತ್ ಕಂಪನಿಯಲ್ಲಿ 2007–08, 2008–09 ಹಾಗೂ 2009–10ನೇ ಸಾಲಿನಲ್ಲಿ ನಷ್ಟವುಂಟಾಗಿರುವ ಮೊತ್ತವೆಷ್ಟು; ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);

ಈ) ಚಾಮುಂಡಿ ವಿದ್ಯುತ್ ಕಂಪನಿಯಲ್ಲಿ 2007–08, 2008–09 ಹಾಗೂ 2009–10ನೇ ಸಾಲಿನಲ್ಲಿ ನಷ್ಟವುಂಟಾಗಿರುವ ಮೊತ್ತವೆಷ್ಟು; ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);

ಉ) ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ 2007–08, 2008–09 ಹಾಗೂ 2009–10ನೇ ಸಾಲಿನಲ್ಲಿ ನಷ್ಟವುಂಟಾಗಲು ಮೊತ್ತವೆಷ್ಟು, ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);